## ನೋ ಯುವರ್ ಕಸ್ಟಮರ್ ಪಾಲಿಸಿ(ನಿಮ್ಮ ಗ್ರಾಹಕರನ್ನು ತಿಳಿಯಿರಿ ನೀತಿ)

ಪ್ರಿಯ ಗ್ರಾಹಕರೆ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬ್ಯಾಂಕುಗಳಿಗೆ 'ನೋ ಯುವರ್ ಕಸ್ಟಮರ್'(ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ,ಕೆವಾಯ್‌ಸಿ)ಕುರಿತು ಕ್ರಮಗಳನ್ನು ರೂಪಿಸಲು,ಜಾರಿಗೆ ತರಲು ಹಾಗೂ ಆ ಬಗ್ಗೆ ಗ್ರಾಹಕರನ್ನು ಸುಶಿಕ್ಷಿತರನ್ನಾಗಿಸಲು ಸುನಿಶ್ಚಿತ ಕ್ರಮ ಕೈಗೊಳ್ಳಲು ಸೂಚನೆ ನೀಡಿದೆ.

ಇದರ ನಿಯಮಾವಳಿಗಳನ್ನು ಪರಿಚಯ ಮಾಡಿಕೊಳ್ಳಲೋಸುಗ ಈ ಬ್ರೊಶರ್‌ನ್ನು ರೂಪಿಸಲಾಗಿದೆ.

ಬ್ಯಾಂಕುಗಳು/ವಿತ್ತೀಯ ಸಂಸ್ಥೆಗಳನ್ನು (ಎಫ್‌ಐ) ಮೋಸದ ವ್ಯವಹಾರದಿಂದ ತಡೆಯಲು ವಿತ್ತೀಯ ಸಂಸ್ಥೆಗಳು 'ನೋ ಯುವರ್ ಕಸ್ಟಮರ್' ಮೇಲೆ ಉತ್ತಮ ನಿರೂಪಣೆಯ ನೀತಿ ಹೊಂದಿರಬೇಕು.ಈ ಪಾಲಿಸಿಯಲ್ಲಿ ಗ್ರಾಹಕರ ಗುರುತು ಹಾಗೂ ಹಿನ್ನಲೆಗೆ ಸಮಾಧಾನಕರ ಮಾಹಿತಿ ಹೊಂದಲು ಅನುಸರಿಸಬೇಕಾದ ವಿಭಿನ್ನ ವಿಧಾನಗಳ ವಿವರಗಳಿವೆ.ಇವಕ್ಕೆ ಗ್ರಾಹಕ ಗುರುತು ವಿಧಾನಗಳು(ಸಿಐಪಿ)ಎಂದು ಕರೆಯುತ್ತಾರೆ.

### 'ನೋ ಯುವರ್ ಕಸ್ಟಮರ್'ಪ್ರಕ್ರಿಯೆ

ಈ ವಿಧಾನದಲ್ಲಿ ಗ್ರಾಹಕರನ್ನು ಗುರುತಿಸುವ ಹಾಗೂ ವಿಶ್ವಸನೀಯ ಸ್ವತಂತ್ರ ಕಾಗದಪತ್ರಗಳು,ಡಾಟಾ ಅಥವಾ ಮಾಹಿತಿ ಬಳಸುವ ಅವಕಾಶವಿರುತ್ತದೆ.ಕೆವಾಯ್‌ಸಿ ಪ್ರಕ್ರಿಯೆಯನ್ನು ಇವನ್ನು ಸುನಿಶ್ಚಿತಗೊಳಿಸಲು ವಿತ್ತೀಯ ಸಂಸ್ಥೆಗಳು ಅನುಸರಿಸುತ್ತವೆ:

1. ಅನಾಮಿಕ,ಕಲ್ಪಿತ ಅಥವಾ ಬೇನಾಮಿ ಹೆಸರಿನಲ್ಲಿ(ಹೆಸರುಗಳಲ್ಲಿ)ಯಾವುದೇ ಖಾತೆ ತೆರೆಯಕೂಡದು
2. ಪ್ರಸ್ತುತ ಕಾನೂನುಗಳು ಹಾಗೂ ನಿಯಮಗಳ ಅನುಪಾಲಿಸುವಲ್ಲಿ ಸಾಕಷ್ಟು ಕಾಳಜಿ ವಹಿಸಿರುವುದು ಅಧಿಕೃತ ಅಧಿಕಾರಿಗಳಿಗೆ ಸಮಾಧಾನಕಾರ ಆಗಿರುವುದು
3. ಬೆನಿಫಿಶಿಯಲ್ ಮಾಲೀಕರನ್ನು ಗುರುತಿಸಲು ಮತ್ತು ಆ ಬಿನಿಫಿಶಿಯಲ್ ಮಾಲೀಕರು ಯಾರು ಎನ್ನುವುದರ ಸಮಾಧಾನಕರ ರೀತಿಯಲ್ಲಿ ಪತ್ತೆ ಮಾಡಲು ವಿತ್ತೀಯ ಸಂಸ್ಥೆ ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದು ತೋರಿಸಲು ಸಮರ್ಥವಾಗಿರುವುದು

### ಗ್ರಾಹಕ ಗುರುತು ಪ್ರಕ್ರಿಯೆ

ಈ ವಿಧಾನದಲ್ಲಿ ಗ್ರಾಹಕರನ್ನು ಗುರುತಿಸುವ ಹಾಗೂ ವಿಶ್ವಸನೀಯ ಸ್ವತಂತ್ರ ಕಾಗದಪತ್ರಗಳು,ಡಾಟಾ ಅಥವಾ ಮಾಹಿತಿ ಬಳಸುವ ಅವಕಾಶವಿರುತ್ತದೆ.ಕೆವಾಯ್‌ಸಿ ಪ್ರಕ್ರಿಯೆಯನ್ನು ಇವನ್ನು ಸುನಿಶ್ಚಿತಗೊಳಿಸಲು ವಿತ್ತೀಯ ಸಂಸ್ಥೆಗಳು ಅನುಸರಿಸುತ್ತವೆ.ವಿತ್ತೀಯ ಸಂಸ್ಥೆಯು ಲೆಂಡಿಂಗ್ ಮಾಡುವಾಗ ಪ್ರಸ್ತುತ ಕಾನೂನುಗಳ ಪ್ರಕಾರ ಅಗತ್ಯವಿರುವಂತೆ ಗ್ರಾಹಕರನ್ನು ಗುರುತಿಸಲು ಹಾಗೂ ಪರೀಕ್ಷಿಸಲು ಅನುವಾಗುವಂತೆ ಕಾಗದಪತ್ರಗಳನ್ನು ಸಂಗ್ರಹಿಸುವುದು.ಸಾಕಷ್ಟು ಕೆವಾಯ್‌ಸಿ ಪ್ರಕ್ರಿಯೆಯನ್ನು ಪಾಲಿಸಿದೆ ಎಂದು ತೋರಿಸಲು ವಿತ್ತೀಯ ಸಂಸ್ಥೆಯು ಕೆಳಗೆ ಪಟ್ಟಿಯಲ್ಲಿರುವ ಯಾವುದಾದರೊಂದು ದಾಖಲೆಯನ್ನು ಗುರುತಿನ ಪುರಾವೆ ಮತ್ತು ನಿವಾಸ ಪುರಾವೆಯಾಗಿ ಸಂಗ್ರಹಿಸಬೇಕು.

| ದಾಖಲೆ | ವಿವರಗಳು |
|---|---|
| ಗುರುತಿನ ಪುರಾವೆ(ಯಾವುದೇ ಒಂದು) | ಪ್ಯಾನ್ ಕಾರ್ಡ್ |
| | ಪಾಸ್‌ಪೋರ್ಟ್ |
| | ಚುನಾವಣಾ ಗುರುತು ಪತ್ರ |
| | ಯುಐಡಿ |
| | ಡ್ರೈವಿಂಗ್ ಲೈಸೆನ್ಸ್ |
| | ಉದ್ಯೋಗದಾತರು ನೀಡಿದ ಗುರುತು ಪತ್ರ |
| ವಿಳಾಸ ಪುರಾವೆ(ಯಾವುದೇ ಒಂದು) | ಪಾಸ್‌ಪೋರ್ಟ್ |
| | ವಿದ್ಯುತ್ ಬಿಲ್ಲು |
| | ಟೆಲಿಫೋನ್ ಬಿಲ್ಲು |
| | ರೇಶನ್ ಕಾರ್ಡ್ |
| | ಲೀಸ್ ಅಗ್ರೀಮೆಂಟ್ |